Upgrading C.M.P.H. dispensary at Murgod

560. SRI BALEKUNDARGI (Bailhongal)—Will the Minister for Health and Family Welfare be pleased to state.—

(a) whether there is a C.M.P.H. type of Hospital in Murigodu of Soundhathi taluk;

(b) the number of employees working in the said Hospital;

(c) the year in which the said Hospital was started;

(d) whether there is any proposal to up-grade the said Hospital?

SRI M. MALLAPPA (Minister for Health and Family Welfare).—

(a) Yes.

(b) 5 employees except the Surgeon who are in receipt of financial assistance. (SMP)

(c) 1946.

(d) The matter will be considered.

ಶ್ರೀ ಆರ್.ಸಿ. ಬಾಳೆಕುಂದರಗಿ,—ಸ್ವಾಮಿ, ಇಲ್ಲಿ ೫ ಮಂದಿ ನೌಕರರಿದ್ದಾರೆ, ಆದರೆ ಡಾಕ್ಟರ್ ಇಲ್ಲ, ಆದಕಾರಣ ಅಲ್ಲಿಗೆ ಡಾಕ್ಟರನ್ನು ನೇಮಕ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ?

†ಶ್ರೀ ಎಂ. ಮಲ್ಲಪ್ಪ.—ಇದು ಸಿ.ಎಂ.ಪಿ.ಎಚ್. ಮಾದರಿ ಆಸ್ಪತ್ರೆ. ಇಲ್ಲಿ ಧನ ಸಹಾಯ ಪಡೆಯುವ ವೈದ್ಯರು ಇದ್ದರು ಮತ್ತು ಪ್ರತಿವರ್ಷವೂ ಎರಡು ಸಾವಿರ ರೂಪಾಯಿಗಳಷ್ಟು ಔಷಧ ವನ್ನು ಕೊಡುತ್ತಿದ್ದೇವೆ. ಇದನ್ನು ಅಪ್‌ಗ್ರೇಡ್ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಆದನ್ನು ವಿಚಾರ ಮಾಡೋಣ.

ಶ್ರೀ ಆರ್.ಸಿ. ಬಾಳೆಕುಂದರಗಿ.—ಈಗ ಅಲ್ಲಿ ಡಾಕ್ಟರ್ಸ್ ಇಲ್ಲ, ಇತರೇ ನೌಕರರು ಮಾತ್ರ ಇದ್ದಾರೆ ಆದು ಹಳ್ಳಿಗಾಡಿನ ಪ್ರದೇಶ ಹಾಗೂ ಲಂಬಾಣ ತಂಡವಿರುವ ಪ್ರದೇಶವಾದ ಕಾರಣ ಅಲ್ಲಿಗೆ ಡಾಕ್ಟರ್‌ನ್ನು ನೇಮಕ ಮಾಡುತ್ತೀರಾ ಮತ್ತು ಆದನ್ನು ಕೂಡಲೇ ಅಪ-ಗ್ರೇಡ್ ಮಾಡುತ್ತೀರಾ?

ಶ್ರೀ ಎಂ. ಮಲ್ಲಪ್ಪ.—ಈಗ ಅಲ್ಲಿ ಲೇಡಿ ಹೆಲ್ತ್ ವಿಜಿಟರ್ ಇದ್ದಾರೆ, ಬೇಸಿಕೆ ಹೆಲ್ತ್ ವರ್ಕರ್ ಇದ್ದಾರೆ, ಮೆಡಿಕಲ್ ಅಟೆಂಡರ್ ಇದ್ದಾರೆ ವಾರ್ಡ್ ಬಾಯ್ ಇದ್ದಾರೆ ಮತ್ತು ಧನ ಸಹಾಯ ಪಡೆಯುವ ವೈದ್ಯರಿದ್ದಾರೆ. ಇನ್ನು ಆದನ್ನು ಅಪಗ್ರೇಡ್ ಮಾಡುವುದನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸುತ್ತದೆ.

ಶ್ರೀ ಆರ್.ಸಿ. ಬಾಳೆಕುಂದರಗಿ.—ಇದು ಪ್ರಾರಂಭವಾಗಿ ೩೩ ವರ್ಷಗಳಾಯಿತು. ಆ ಭಾಗದಲ್ಲಿ ಇಂತಹ ೩ ದವಾಖಾನೆಗಳಿವೆ. ಮುರಗೋಡ, ಹಿಪ್ಪರಗಿ ಹಾಗೂ ಸೌಂದತ್ತಿಯಲ್ಲಿರುವ ಜನರಿಗೆ ಈ ಸೆಂಟರ್‌ಗಳನ್ನು ಅಪಗ್ರೇಡ್ ಮಾಡದ ಕಾರಣ ತೊಂದರೆಯಾಗಿದೆ, ಆದಕಾರಣ ಇನ್ನು ೬-೮ ತಿಂಗಳಲ್ಲಿ ಅಪ-ಗ್ರೇಡ್ ಮಾಡುತ್ತೀರಾ?

ಶ್ರೀ ಎಂ ಮಲ್ಲಪ್ಪ.—ಇಷ್ಟೇ ತಿಂಗಳು ಎಂದು ಹೇಳುವುದಕ್ಕಾಗುವುದಿಲ್ಲ, ಅಂತೂ ತೀವ್ರ ವಾಗಿ ಕ್ರಮ ಕೈಕೊಳ್ಳುತ್ತೇವೆ.